ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೇ, ಈ ಪಟ್ಟಿಯಲ್ಲಿ ನನ್ನ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬಂದಿರುವುದಿಲ್ಲ.

ಅಧ್ಯಕ್ಷರು : ನಾನು ಕಳುಹಿಸಿಕೊಡುತ್ತೇನೆ.

ಜನ್ಮ ದಿನದ ಶುಭಾಶಯ

ಅಧ್ಯಕ್ಷರು : ಈ ದಿವಸ ಮಾನ್ಯ ಸದಸ್ಯರಾದ ಡಿ. ಹಲಗೇಗೌಡರ ಜನ್ಮದಿನವಾಗಿದೆ. ಅವರಿಗೆ ಎಲ್ಲ ಸದಸ್ಯರ ಪರವಾಗಿ ನಾನು ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಒಂದು ವಾರದಿಂದ ಮುಚ್ಚಿರುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕಳೆದ ಒಂದು ವಾರದಿಂದ ಮುಚ್ಚಿದ್ದಾರೆ. ಇವತ್ತು ಅಲ್ಲಿರತಕ್ಕಂಥ ವಿದ್ಯಾರ್ಥಿಗಳು ಮತ್ತು ಭೋದಕೇತರ, ಸಿಬ್ಬಂದಿ ವರ್ಗದವರು, ಕೆಲವು ಬೋಧಕವರ್ಗದವರು ನಮ್ಮನ್ನು ಭೇಟಿ ಮಾಡಿ ಮತ್ತೆ ವಿಶ್ವವಿದ್ಯಾನಿಲಯಕ್ಕೆ ವಾಪಸ್ ನಾವು ಹೋಗುವುದಿಲ್ಲ. ಅಲ್ಲಿ ಬಹಳ ತೀವ್ರವಾದ ಪರಿಸ್ಥಿತಿ ಉದ್ಭವವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇವೆ. ತಮ್ಮ ಮೂಲಕ ಅವರಲ್ಲಿ ವಿನಂತಿ ಕೋರಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಕಾರಣವೇನೆಂದರೆ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮತ್ತೆ ಬೇರೆ ಬೇರೆ ಸಮಸ್ಯೆಗಳು ಉದ್ಭವವಾಗಬಹುದು, ಕಾನೂನು ಪರಿಸ್ಥಿತಿ ಉದ್ಭವವಾಗಬಹುದು. ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಅರಿತುಕೊಂಡು ಅಲ್ಲಿನ ಉಪಕುಲಪತಿಗಳನ್ನು, ವಿದ್ಯಾರ್ಥಿ ಮುಖಂಡರನ್ನೂ ಮತ್ತು ಸಿಬ್ಬಂದಿ ವರ್ಗದವರನ್ನೂ ಕರೆಸಿ ಮಾತನಾಡಿ ಮಾನ್ಯ ಶಿಕ್ಷಣ ಮಂತ್ರಿಗಳು ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದಂಥ ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ. ಸುಮಾರು ಮೂರು ನಾಲ್ಕು ದಿವಸಗಳಿಂದ ಆ ಪ್ರದೇಶಕ್ಕೆ ಯಾರೂ ಹೋಗುವ ಪರಿಸ್ಥಿತಿ ಇಲ್ಲ. ವಿದ್ಯಾರ್ಥಿಗಳಿಗೂ ಮತ್ತು ಆಡಳಿತ ವರ್ಗದವರಿಗೂ ಬಹಳ ತೀವ್ರವಾದ ಘರ್ಷಣೆ ಉಂಟಾಗಿ ಅಂತ್ಯಕ್ಕೆ ತಲುಪುತ್ತಿದೆ. ಸರ್ಕಾರ ಅವರನ್ನು ಕರೆದು ಮಾತುಕತೆ ನಡೆಸುವ ಪ್ರಯತ್ನ ಮಾಡಿಲ್ಲ. ಅವರದು ತಪ್ಪಾಗಿದೆಯೋ ಅಥವಾ ಇವರದು ತಪ್ಪಾಗಿದೆಯೇ ಅವರನ್ನು ಕರೆಸಿ ಮಾತುಕತೆ ಆಡಿ ಏನಾದರೂ ಪರಿಹಾರವನ್ನು ಕಂಡುಹಿಡಿಯತಕ್ಕಂಥ ಪ್ರಯತ್ನ ಇದುವರೆಗೆ ಮಾಡಲಿಲ್ಲ. ನಿನ್ನೆ ಮೊನ್ನೆ ಅವರ ಭೂತಗಳನ್ನು ಸುಟ್ಟು ಹಾಕಿರುತ್ತಾರೆ. ರಸ್ತೆಯಲ್ಲಿ ಗದ್ದಲಗಳು ನಡೆಯುತ್ತಿವೆ. ಕಾಲೇಜುಗಳನ್ನು ಮುಚ್ಚತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇಡೀ ಬೆಂಗಳೂರಿನಲ್ಲಿರುವ ಎಲ್ಲ ಕಾಲೇಜುಗಳನ್ನು ಮುಚ್ಚತಕ್ಕಂಥ ಪರಿಸ್ಥಿತಿಗೆ ತಲುಪುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸಕಾಲದಲ್ಲಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಕರೆದು ಅವರ ಜೊತೆಯಲ್ಲಿ ಮಾತುಕತೆಗಳನ್ನು ಆಡಿ, ವಿದ್ಯಾರ್ಥಿಗಳ ಜೊತೆಯಲ್ಲಿ ಮಾತನಾಡಿ ಅವರ ಬೇಡಿಕೆ ಏನಿದೆ ಮತ್ತು ಭೋದಕರ ಬೇಡಿಕೆ ಏನಿದೆ ಅದನ್ನು ಸರಿಪಡಿಸತಕ್ಕಂಥದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ಬಗ್ಗೆ ತಾವು ಗಮನಹರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ನಾನು ಸಹ ಈ ವಿಷಯದ ಬಗ್ಗೆ ನಿನ್ನೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು; ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಅಲ್ಲಿ ಬಹಳ ಅನಾಹುತಗಳು ನಡೆಯತಕ್ಕ ಸಂದರ್ಭ ಇದೆ. ಬಹಳ ವಿಕೋಪಕ್ಕೆ ಹೋಗತಕ್ಕ ಪರಿಸ್ಥಿತಿ ಇದೆ. ಆದುದರಿಂದ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಬಹಳ ಅನಾಹುತವಾಗುತ್ತದೆ. ಅಲ್ಲಿರತಕ್ಕ ಉಪಕುಲಪತಿಗಳ ಮೇಲೆ ಬಹಳ ಗುರುತರವಾದ ಆರೋಪಗಳಿವೆ. ಅವರು ಮಾಡಿರತಕ್ಕ ಅವ್ಯವಹಾರಗಳು ಬಹಳ ಗುರುತರವಾಗಿವೆ. ಅದಕ್ಕೋಸ್ಕರ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ. ಅದಕ್ಕೆ ಈಗಲೇ ಉತ್ತರ ಕೊಡಿಸುತ್ತೀರಾ ಅಥವಾ ತರಿಸಿಕೊಡುತ್ತೀರೊ. ತಮಗೆ ಬಿಟ್ಟಿದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಸ್ವಾಯತ್ತತೆ ಪಡೆದಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ವಿಶ್ವವಿದ್ಯಾನಿಲಯದ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸುವುದಕ್ಕೆ ಕೆಲವು ಮನವಿಗಳನ್ನು ಕೊಟ್ಟಿದ್ದಾರೆ. ಮೇಲ್ನೆಯಲ್ಲೂ ಈ ವಿಚಾರ ಬಂದಿದೆ. ನಾನು ಆಗ ಇರಲಿಲ್ಲ. ಆ ಮನವಿಯ ಪ್ರತಿ ನನಗೆ ಬಂದಿದೆ. ಅವರು ಮುಖ್ಯ ಮಂತ್ರಿಗಳನ್ನು ಭೇಟಿಯಾಗಿದ್ದಾರೆ. ಮುಖ್ಯ ಮಂತ್ರಿಗಳ ಜೊತೆ ನಾನು ಕೂಡ ಸಮಾಲೋಚನೆ ಮಾಡಿದ್ದೇನೆ. ಇವತ್ತು 12.30ಕ್ಕೆ ಎರಡೂ ಗುಂಪಿನವರು ನನ್ನನ್ನು ಭೇಟಿಯಾಗುತ್ತಿದ್ದಾರೆ. ಅವರ ಜೊತೆ ನಾನು ಸಮಾಲೋಚನೆ ಮಾಡುತ್ತಿದ್ದೇನೆ. ಕುಲಸಚಿವರ ಜೊತೆಯಲ್ಲಿ ಇಂದು ಸಂಜೆ 4.30ಕ್ಕೆ ಈ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು : ಅದೇನು ನನಗೆ ಸರಿಯಾಗಿ ಅರ್ಥವಾಗಲಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಕುಲಸಚಿವ ಅಂದರೆ ರಿಜಿಸ್ಟ್ರಾರ್ ಎಂದು. ಕುಲಪತಿ ಅಂದರೆ ವೈಸ್ ಚಾನ್ಸ್‌ಲರ್, ಕುಲಾಧಿಪತಿ ಅಂದರೆ ಚಾನ್ಸ್‌ಲರ್ ಎಂದು. ಮಾನ್ಯ ಶಿಕ್ಷಣ ಸಚಿವರು ಅದನ್ನು ಸ್ವಲ್ಪ ಇಂಗ್ಲೀಷಿನಲ್ಲೇ ಹೇಳಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ : ಕುಲಪತಿ ಅಂದರೆ ಚಾನ್ಸ್‌ಲರ್,ಉಪಕುಲಪತಿ ಅಂದರೆ ವೈಸ್ ಚಾನ್ಸಲರ್. ನಾನು ಕುಲಸಚಿವರು ಎಂದು ಹೇಳಿದೆ. I stand corrected. ಈ ಸಮಸ್ಯೆಯ ಬಗ್ಗೆ ಅವರ ಜೊತೆಯಲ್ಲಿ ಇವತ್ತು ಹನ್ನೆರಡೂವರೆ ಗಂಟೆಗೆ ಮಾತನಾಡುತ್ತಿದ್ದೇನೆ. ಬಹುಶಃ ಈ ಸಮಸ್ಯೆಯನ್ನು ಇವತ್ತು ನಾಳೆಯೊಳಗೆ ಬಗೆಹರಿಸಬಹುದೆಂಬ ಆತ್ಮವಿಶ್ವಾಸ ನನಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಲ್ಲಿರತಕ್ಕ ಅಧಿಕಾರಿಗಳನ್ನು ನೌಕರರನ್ನು ವೈಸ್ ಚಾನ್ಸಲರ್ ಸಸ್ಪೆಂಡ್ ಮಾಡುತ್ತಿದ್ದಾರೆ. ಫರ್ದರ್ ಸಸ್ಪೆನ್‌ಷನ್ ಆಗದಂತೆ ನೋಡಿಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಫರ್ದರ್ ಸಸ್ಪನ್‌ಷನ್ ಆಗುವುದಿಲ್ಲ. ಇವತ್ತು ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ವೈಸ್-ಚಾನ್ಸ್‌ಲರ್ ಜೊತೆ ನಾನು ಮಾತುಕತೆ ಮಾಡಿದ್ದೇನೆ.

ಶ್ರೀ ಸಿ. ಬೈರೇಗೌಡ : ಸಿಂಡಿಕೇಟ್‌ನಲ್ಲಿ ಕೇವಲ ಅಧಿಕಾರಿಗಳು ಇದ್ದಾರೆ. ಅಲ್ಲಿ ಬೇರೆ ಜನತಾ ಪ್ರತಿನಿಧಿಗಳು ಇಲ್ಲ. ಅಲ್ಲಿ ಗಣೇಶ ಎಂಬುವರು ಸಿಂಡಿಕೇಟಿನ ಸದಸ್ಯರಿದ್ದಾರೆ. ಆದ್ದರಿಂದ ಕೂಡಲೇ ಸಿಂಡಿಕೇಟಿಗೆ ಬೇರೆ ಸದಸ್ಯರನ್ನು ನೇಮಿಸುವ ಕೆಲಸವನ್ನು ಶೀಘ್ರವಾಗಿ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ಯಾವುದಾದರೂ ಒಂದು ಪರಿಹಾರ ಉಪಾಯ ಹುಡುಕಿ ಇವತ್ತು ಸಂಜೆ ಅಥವಾ ನಾಳೆ ಬೆಳಿಗ್ಗೆ ಈ ಸದನದಲ್ಲಿ ಹೇಳಿಕೆ ಕೊಡುತ್ತೇನೆ. ಫರ್ದರಿ ಸಸ್ಪೆನ್‌ಷನ್ ಆಗುವುದಿಲ್ಲ.

ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ಧರಣಿ ಸತ್ಯಾಗ್ರಹ.

+ ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮೊನ್ನೆ ನಿನ್ನೆ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಮತ್ತು ಇವತ್ತು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪರ್ಮಿಷನ್ ತೆಗೆದುಕೊಂಡಿದ್ದೆ. ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಕಳೆದ 6ನೇ ತಾರೀಖಿನಿಂದ ಕುಡಿಯುವ ನೀರಿಲ್ಲವೆಂದು ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಸಂಬಂಧಪಟ್ಟ ಸಚಿವರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ತಂತಿ ಮೂಲಕ ಮನವಿ ಮೂಲಕ ವಿಷಯವನ್ನು ತಿಳಿಸಿದ್ದಾರೆ. ಇದುವರೆಗೆ ಸರ್ಕಾರದಿಂದ ಯಾವುದೇ ಕ್ರಮ ಇಲ್ಲ. ಚಿಕ್ಕೋಡಿ ಶಿಕ್ಷಕರಲ್ಲಿ ಎಲ್ಲಾ ಪಕ್ಷದವರು, ವಾಲೆಂಟರಿ ಆರ್ಗನೈಸೇಷನ್ಸ್ ಕೂಡಿ 6ನೇ ತಾರೀಖಿನಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಲ್ಲಿ ಬಿಸಿನೆಸ್ ಎಸಾಬ್ಲಿಷ್‌ಮೆಂಟ್‌ಗಳು ಬಂದ್ ಆಗಿವೆ. ಕೋರ್ಟ್‌ಗಳು ಬಂದ್ ಆಗಿವೆ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ಇವತ್ತು ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇವತ್ತು ಚಿಕ್ಕೋಡಿಗೆ ಕುಡಿಯುವ ನೀರಿನ ಯೋಜನೆ ಏನಿದೆ. ಆ ಯೋಜನೆಯನ್ನು ಆದಷ್ಟು ಬೇಗ ಸರ್ಕಾರ ಜಾರಿಗೆ ತರಬೇಕಾಗುತ್ತದೆ. ಚಿಕ್ಕೋಡಿ ಮುನಿಸಿಪಾಲಿಟಿಯಲ್ಲಿ ಹಣ ಇಲ್ಲ ಎಂದು ಆ ಯೋಜನೆಯನ್ನು ಜಾರಿಗೆ ತರಲಿಕ್ಕೆ ಆಗಲಿಲ್ಲ. ನಾನು ಹೆಚ್.ಯು.ಡಿ. ಮಿನಿಸ್ಟರ್ ಆಗಿದ್ದಾಗ 5 ಲಕ್ಷ ರೂಪಾಯಿಯನ್ನು ಆ ಮುನಿಸಿಪಾಲಿಟಿಗೆ ಕೊಟ್ಟಿದ್ದೆ. ಈಗ ಡೆಪ್ಯುಟಿಕಮಿಷನರ್ 10 ಲಕ್ಷ ರೂಪಾಯಿಯನ್ನು ಕೊಟ್ಟಿದ್ದು 2 ಲಕ್ಷ ರೂಪಾಯಿ ಮುನಿಸಿಪಾಲಿಟಿ ಹಾಕಿ ಒಟ್ಟು 17 ಲಕ್ಷ ರೂಪಾಯಿಗಳನ್ನು ಹಾಕಿ ಆ ಯೋಜನೆ ಮಾಡಲಿಕ್ಕೆ ಸಾಧ್ಯವಿದೆ. ಆದರೆ ಅದು ತಡವಾಗುತ್ತದೆ. ಆದ್ದರಿಂದ ತಕ್ಷಣ ಬೋರ್‌ವೆಲ್ ಮಾಡುವ ಬಗ್ಗೆ ಅಥವಾ ಲಾರಿ ಮುಖಾಂತರ ನೀರು ಪೂರೈಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಚಿಕ್ಕೋಡಿ ಶಹರದಲ್ಲಿ ಕಳೆದ 20-30 ವರ್ಷಗಳಿಂದ ಈ ಜ್ವಲಂತ ಸಮಸ್ಯೆ ಏನಿದೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಮಾತು ಹೇಳಬೇಕು. ಚಿಕ್ಕೋಡಿಯಲ್ಲಿ 6ನೇ ತಾರೀಖಿನಿಂದ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಬಿಸಿನೆಸ್ ಎಸ್ಟಾಬ್ಲಿಷ್‌ಮೆಂಟ್‌ಗಳು ಬಂದ್ ಆಗಿವೆ. ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಮುಖ್ಯ ಮಂತ್ರಿಗಳು ಕುಡಿಯುವ ನೀರಿನ ಅಭಾವ ದೂರ ಮಾಡುವುದಕ್ಕೆ ಹೆಚ್ಚು ಪ್ರಿಯಾರಿಟಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಯಾವುದೇ ಕ್ರಮ ಸರ್ಕಾರದಿಂದ ಇನ್ನೂ ಆಗಿಲ್ಲ. ಹೆಚ್. ಯು.ಡಿ. ಮಿನಿಸರ್‌ಗೆ ಟೆಲಿಗ್ರಾಂ ಬಂದಿದೆ. ತಮಗೂ ಟೆಲಿಗ್ರಾಂ ಬಂದಿದೆ. ಆದ್ದರಿಂದ ಪ್ರಾಧಾನ್ಯತೆ ಮೇಲೆ ಚಿಕ್ಕೋಡಿ ಕುಡಿಯುವ ನೀರಿನ ಯೋಜನೆ ಮುಗಿಸುವುದಕ್ಕೆ ಕೆಲಸ ಶುರು ಮಾಡಬೇಕಾಗುತ್ತದೆ. ಅಲ್ಲಿ ನೀರಿಲ್ಲ. 6ನೇ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ತಕ್ಷಣ ಲಾರಿ ಮುಖಾಂತರ, ಬೋರ್‌ವೆಲ್ ಮಾಡಿ, ಓಪನ್ ವೆಲ್ ಮಾಡಿ ನೀರು ಪೂರೈಸುವ ವ್ಯವಸ್ಥೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರೆ ಒಳ್ಳೆಯದಾಗುತ್ತದೆ.

(ಶ್ರೀಮತಿ ಸುಮ ವಸಂತ ಅವರು ಪೀಠದಲ್ಲಿದ್ದರು)